# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ : 586
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11.07.2023
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಶಿವಮೊಗ್ಗ ವಿಮಾನ ನಿಲ್ದಾಣದ ಹೊಸ ರನ್‌ವೇ ನಿರ್ಮಾಣ ಯೋಜನೆಯ ಪ್ರಾರಂಭಿಕ ಯೋಜನಾ ಅಂದಾಜು ಮೊತ್ತವೆಷ್ಟು; ಇದನ್ನು ಎಷ್ಟು ಬಾರಿ ಪರಿಷ್ಕರಿಸಲಾಗಿದೆ; ಪ್ರಸ್ತುತ ಈ ಯೋಜನೆಯ ಪರಿಷ್ಕೃತ ಯೋಜನಾ ಅಂದಾಜು ಮೊತ್ತವೆಷ್ಟು; | ಶಿವಮೊಗ್ಗ ವಿಮಾನ ನಿಲ್ದಾಣದ ಪ್ರಾರಂಭಿಕ ಅಂದಾಜು ಮೊತ್ತ ರೂ.220.00 ಕೋಟಿಗಳು. ವಿಮಾನ ನಿಲ್ದಾಣದ ಅಂದಾಜು ಮೊತ್ತವನ್ನು ಎರಡು ಬಾರಿ ಪರಿಷ್ಕರಿಸಲಾಗಿದೆ. ಪ್ರಸ್ತುತ, ಈ ಯೋಜನೆಗೆ ಪರಿಷ್ಕೃತ ಅಂದಾಜು ಮೊತ್ತ ರೂ.449.22 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ. |
| (ಆ) | ಹೊಸ ರನ್‌ವೇ ನಿರ್ಮಾಣ ಕಾಮಗಾರಿಯ ಸಮಗ್ರ ಯೋಜನಾ ವರದಿಯಲ್ಲಿರುವಂತೆ ರನ್‌ವೇ ಉದ್ದ ಎಷ್ಟು; ಕಾಮಗಾರಿ ಗುತ್ತಿಗೆ ಪಡೆದ ಸಂಸ್ಥೆ ಯಾವುದು; ಈ ಕಂಪನಿಯು ಈ ಹಿಂದೆ ರನ್‌ವೇ ಸಮಾನಾಂತರ ಕೆಲಸ ನಿರ್ವಹಿಸಿದ ಅನುಭವ ಹೊಂದಿದೆಯೇ; ಗುತ್ತಿಗೆ ಪಡೆದ ಸಂಸ್ಥೆ ಹೊಸದಾಗಿ ನಿರ್ಮಿಸಿರುವ ರನ್‌ವೇ ಉದ್ದ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು). | ಹಳೆಯ ರನ್ ವೇ ನಿರ್ಮಾಣ ಕಾಮಗಾರಿಯನ್ನು ಎಟಿಆರ್-72 ಮಾದರಿ ವಿಮಾನಗಳ ಹಾರಾಟಕ್ಕೆ ಅನುವಾಗುವಂತೆ 2050ಮೀX30ಮೀ ವಿನ್ಯಾಸದಂತೆ ನಿರ್ಮಾಣ ಮಾಡಲು ಶ್ರೀ ಇಬ್ರಾಹಿಂ ಷರೀಫ್, 1ನೇ ದರ್ಜೆ ಗುತ್ತಿಗೆದಾರರು, ತೀರ್ಥಹಳ್ಳಿ ಇವರಿಗೆ ವಹಿಸಲಾಯಿತು. ಈ ಕಾಮಗಾರಿಯು ಪ್ರಗತಿಯಲ್ಲಿರುವಾಗ ಸದರಿ ವಿಮಾನ ನಿಲ್ದಾಣವನ್ನು ಎಟಿಆರ್-72 ಮಾದರಿ ವಿಮಾನಗಳ ಹಾರಾಟಕ್ಕೆ ಬದಲಾಗಿ ಏರ್‌ಬಸ್-320 ಮಾದರಿ ವಿಮಾನಗಳ ಹಾರಾಟಕ್ಕೆ ಅನುವಾಗುವಂತೆ ನಿರ್ಮಿಸಲು ನಿರ್ಧರಿಸಿದ ಕಾರಣ ಈ ರನ್‌ವೇ ವಿನ್ಯಾಸವನ್ನು 3050ಮೀX45ಮೀ ನಿರ್ಮಿಸಲು ಸದರಿ ಗುತ್ತಿಗೆದಾರರಿಗೆ ಹೆಚ್ಚುವರಿ ಕಾಮಗಾರಿಯನ್ನು ಸಹ ನೀಡಲಾಯಿತು.<br><br>ಹೊಸ ರನ್‌ವೇ ನಿರ್ಮಾಣ ಕಾಮಗಾರಿಯ ಸಮಗ್ರ ಯೋಜನಾ ವರದಿಯಲ್ಲಿರುವಂತೆ ರನ್‌ವೇ ಉದ್ದ: 3050ಮೀ ಇರುತ್ತದೆ. ಸದರಿ ಗುತ್ತಿಗೆದಾರರು ಈ ಹಿಂದೆ ರನ್‌ವೇ ಕಾಮಗಾರಿಯ ಸಮಾನಾಂತರ ಕೆಲಸ ನಿರ್ವಹಿಸಿರುವ ದಾಖಲೆಗಳನ್ನು ಸಲ್ಲಿಸಿರುತ್ತಾರೆ.<br><br>ಹಳೆ ಮತ್ತು ಹೊಸ ರನ್‌ವೇ ಕಾಮಗಾರಿಯು ಒಂದೇ ಆಗಿದ್ದು, ಈವರೆಗೆ ಒಟ್ಟು ರೂ. 247.98 ಕೋಟಿ ವೆಚ್ಚ ಮಾಡಲಾಗಿದೆ. ಬಾಕಿ ಸುಮಾರು ರೂ. 21.85 ಕೋಟಿ ಪಾವತಿಸಬೇಕಿದೆ. |
| (ಇ) | ಈ ಹಿಂದೆ ಹಳೆಯ ರನ್‌ವೇ ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದ ಸಂಸ್ಥೆ ಯಾವುದು; ಆ ಸಂಸ್ಥೆಯಿಂದ ನಿರ್ಮಿಸಲಾಗಿರುವ ರನ್‌ವೇಯ ಉದ್ದ ಎಷ್ಟು; ಸಂಸ್ಥೆಗೆ ಪಾವತಿಸಲಾದ ಮೊತ್ತವೆಷ್ಟು; ಪಾವತಿಸಲು ಬಾಕಿಯಿರುವ ಮೊತ್ತ ವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು). | |

<table>
<tr>
<td>(ಈ)</td>
<td>ಶಿವಮೊಗ್ಗ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ಒಳಗಡೆ ಲಭ್ಯವಾದ ಭಾರಿ ಗಾತ್ರದ ಶಿಲೆ ಕಲ್ಲು ಬಂಡೆಗಳನ್ನು ಸ್ಫೋಟಿಸಿ ಒಡೆಯಲಾಗಿದ್ದು, ಇವುಗಳನ್ನು ಎಲ್ಲಿಗೆ ಸಾಗಾಟ ಮಾಡಲಾಗಿದೆ; ಯೋಜನೆಗೆ ಇವನ್ನು ಬಳಸಿಕೊಂಡಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಬಳಸಲಾಗಿದೆ. ಈ ಸಂಬಂಧ ಪಾವತಿಸಲಾದ ರಾಜಧನದ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು).</td>
<td>ಶಿವಮೊಗ್ಗ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ಒಳಗಡೆ ಲಭ್ಯವಾದ ಗಟ್ಟಿ ಕಲ್ಲನ್ನು ವಿಮಾನ ನಿಲ್ದಾಣ ಕಾಮಗಾರಿಗೆ ಬಳಸುವಲ್ಲಿ ಎರಡು ವಿಧಾನಗಳನ್ನು ಪಾಲಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.
<table>
<tr>
<td>1)</td>
<td>ಈವರೆವಿಗೆ 143993.08 ಘನ.ಮೀ ಗಳಷ್ಟು ಕಲ್ಲನ್ನು ಸ್ಫೋಟಕಗಳನ್ನು ಬಳಸಿ ಅಗೆತ ಮಾಡಲಾಗಿದ್ದು, ಸದರಿ ಗಟ್ಟಿ ಕಲ್ಲನ್ನು ಅದೇ ವಿಮಾನ ನಿಲ್ದಾಣ ಕಾಮಗಾರಿಯಲ್ಲಿ ಉಪಯೋಗಿಸಲು ಅಂದಾಜುಪಟ್ಟಿಯಲ್ಲಿ ಅನುವು ಮಾಡಿ ಕೊಳ್ಳಲಾಗಿದ್ದು, ಅದರಂತೆ ಗಟ್ಟಿ ಕಲ್ಲನ್ನು ಎತ್ತರದ ಏರಿ ನಿರ್ಮಾಣ ಮಾಡಲು ಮರುಬಳಕೆ ಮಾಡಲಾಗಿದೆ. ಅಗೆತ ಮಾಡಿದ ಗಟ್ಟಿ ಕಲ್ಲನ್ನು ಸಂಪೂರ್ಣವಾಗಿ ಸದರಿ ಕಾಮಗಾರಿಗೆ ಮರುಬಳಕೆ ಮಾಡಿರುವುದರಿಂದ ರಾಜಧನ ಕಟಾವಣೆ ಮಾಡುವ ಅವಶ್ಯಕತೆ ಉದ್ಭವಿಸಿರುವುದಿಲ್ಲ.</td>
</tr>
<tr>
<td>2</td>
<td>ಮುಂದುವರೆದು 1,82,221.12 ಘನ ಮೀ ಗಟ್ಟಿ ಕಲ್ಲನ್ನು ಕಾಮಗಾರಿ ಶೆಡ್ಯೂಲ್ ನಂತೆ ಗುತ್ತಿಗೆದಾರರಿಗೆ ನೀಡಲಾಗಿರುತ್ತದೆ. ಸ್ಫೋಟಕಗಳನ್ನು ಬಳಸಿ ಗಟ್ಟಿಕಲ್ಲನ್ನು ಅಗೆತ ಮಾಡಲು ಚಾಲ್ತಿ ಪಿ.ಡಬ್ಲ್ಯೂ.ಡಿ ಎಸ್.ಆರ್ ನಂತೆ ಪ್ರತಿ ಕ್ಯೂ.ಮೀ ಗಟ್ಟಿ ಕಲ್ಲಿಗೆ ರೂ.578.34 ರ ಬದಲಿಗೆ ರೂ.333.33ಗಳನ್ನು ಕಡಿತಗೊಳಿಸಿ, ಗಟ್ಟಿಕಲ್ಲು ಅಗೆತದ ವೆಚ್ಚಕ್ಕೆ ಮಾತ್ರ ದರಗಳನ್ನು ಲೆಕ್ಕಹಾಕಿ ಪ್ರತಿ ಕ್ಯೂ. ಮಿ.ಗೆ ರೂ.161.00 ಗಳನ್ನು ನೀಡಲಾಗಿರುತ್ತದೆ. ಆದ್ದರಿಂದ ಗಟ್ಟಿಕಲ್ಲಿನ ದರವನ್ನು, ದರ ವಿಶ್ಲೇಷಣೆ ಸಮಯದಲ್ಲಿ ಕಡಿತಗೊಳಿಸಿರುವ ಕಾರಣ ರಾಜಧನ ಕಟಾವಣೆಯ ಪ್ರಶ್ನೆ ಉದ್ಭವಿಸಿರುವುದಿಲ್ಲ.</td>
</tr>
</table>
</td>
</tr>
</table>

| | | |
|---|---|---|
| (ಉ) | ಮಲೆನಾಡಿನ ಪ್ರದೇಶದಲ್ಲಿರುವ ಶಿವಮೊಗ್ಗ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ಒಳಗಡೆ ಯಾವ ವೈಜ್ಞಾನಿಕ ವರದಿಯ ಆಧಾರದ ಮೇಲೆ ಖರ್ಜೂರದ ಗಿಡಗಳನ್ನು ಬೆಳಸಲಾಗಿದೆ (ಈ ಬಗ್ಗೆ ತಜ್ಞರ ವರದಿಯ ಸಂಪೂರ್ಣ ಮಾಹಿತಿಯನ್ನು ನೀಡುವುದು) | ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಬೆಳಸಲಾದ ಗಿಡವು ಮೂಲ ಖರ್ಜೂರದ ಗಿಡವಾಗಿದೆ ಅಲಂಕಾರಕ್ಕಾಗಿ ಬೆಳೆಸುವ ಮಾರ್ಪಾಡಿತ ತಳಿಯ ಗಿಡವಾಗಿರುತ್ತದೆ. |

ಸಂಖ್ಯೆ:ಮೂಅಇ 87 ರಾಅವಿ 2023

(ಎಂ.ಬಿ.ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು